ಹೊಲಿಸಿದ ಡ್ರೆಸ್ಸಿನ ಹಾಗೆ. ಅವಳಷ್ಟೇ ಅಲ್ಲ. ಅವಳಂಥ ಎಲ್ಲರ ಯೂನಿಫಾರ್ಮ್ ಅದು. 'ಇವ್ರ ಯೂನಿಫಾರ್ಮ್ ಮನಿ ಹಾಳಾಗ' ಅನ್ನಿಸ್ತು ಶಾಲಿನಿಗೆ. ಅವಳು ನಿಜಕ್ಕೂ ಚೆಲುವೆಯೇ ಅಥವಾ ಈಗ ಇಲ್ಲಿ ಈ ಹೊತ್ತಿನಲ್ಲಿ ಹಾಗೆ ಕಾಣುತ್ತಿರುವಳೇ? ಬಗೆಹರಿಯದ್ದು. ತನ್ನ ಅರ್ಧ ವಯಸ್ಸಿನ ಹುಡುಗಿಯನ್ನು ಅಸೂಯೆಯಿಂದ ನೋಡುವ ಹರಕತ್ತೇನೂ ಅವಳಿಗಿರಲಿಲ್ಲ. ಆದರೆ ದುರ್ಲಭ್ಯದ ಒಂದು ರಜೆಯನ್ನು ಇಲ್ಲಿ ಕಳೆಯುವ ಹಾಗೆ ಮಾಡಿದವಳು ಇವಳಲ್ಲವೇ? ಎಂಬ ಸಿಡಿಮಿಡಿ. ಒಂದು ಸುಂದರ ದೊಡ್ಡ ಗ್ಲಾಸಿನಲ್ಲಿ ಕಾಲು ಭಾಗವೂ ಇಲ್ಲದ ಜ್ಯೂಸ್ ಬಂತು. ಶಾಲಿನಿಗೆ ಕುಡಿಯಲೂ ಭಯ. ಹಾಳಾದವ್ರು ಏನಾರೂ ಬೆರಸಿಟ್ಟರೆ... ಯಾಕೋ ಅಪನಂಬಿಕೆಯ ಮಹಾ ಕೂಪದೊಳಗೆ ಹೂತುಹೋಗುತ್ತಿರುವ ಗಾಬರಿ. ಈ ಮಾಧವಿ ದೇಸಾಯಿ ಎಂಬ ಬೆಡಗಿಯನ್ನು ದರಕ್ಕನೆ ಎಳೆದುಕೊಂಡು ಹೋಗಿ, ರಣರಣ ಸುರಿವ ಬಿಸಿಲಿನ ಡಾಂಬರು ರಸ್ತೆಯ ಮೇಲೆ ಅರ್ಧಗಂಟೆ ಚೆಲ್ಲಿ, ಹೋಗಿ ನೋಡಬೇಕಿವಳ ಅಂದವ ಅನ್ನಿಸಿ ಕಿಸಕ್ಕನೆ ನಕ್ಕಳು. ಪಕ್ಕದಲ್ಲಿ ಹೆಂಡತಿಯಿದ್ದಾಳೆಂಬುದನ್ನು ಸುತಾರಾಂ ಮರೆತು ತನ್ನನ್ನು ತಾನು ಸಂಭಾಳಿಸಿಕೊಳ್ಳಲು ಪಡಿಪಾಟಲಿಗೆ ಬಿದ್ದಿದ್ದ ಪ್ರದೀಪ, ಜ್ಯೂಸ್ ಕುಡಿದು ಕೆಳಗಿಟ್ಟ. ಮಾಧವಿ ದೇಸಾಯಿ ಮಾತು ಸುರು ಮಾಡಿದಳು ಮೊದಲ ಹಂತ. ಟೇಬಲ್ ಮೇಲಿದ್ದ ಮಸ್ತ ಮಸ್ತ ಅಲ್ಬಂನಲ್ಲಿ ಅವರ ಕಂಪನಿಯ ಪ್ರೊಡಕ್ಟ್‌ಗಳ ಪರಿಚಯ. ಅದಕ್ಕೆ ಮನುಷ್ಯರಿಗೆ ಹೆಲ್ತ ಎಷ್ಟು ಮುಖ್ಯ, ಬಾಡಿ ಮೆಂಟೇನೆನ್ಸ್ ಎಷ್ಟು ಇಂಪಾರ್ಟಂಟ್ ಎಂಬ ನುಡಿಗಟ್ಟುಗಳು. ಪಳಗಿದ ಹುಲಿಯಂತಹ ಹೆಣ್ಣು. ಇಲ್ಲ, ಇರ್ಲಿ, ಇರ್ಲಿಬಿಡಿ ಅಂತ ಸರಿಸಿಡಲು ಆಗದ ಮಾತುಗಳು, ಅಲ್ಲಿರುವ ಪ್ರಾಡಕ್ಟ್‌ಗಳನ್ನು ಒಂದೊಂದೇ ಪುಟ ತೆಗೆದು, ಇವಳು ಪಟಪಟಾಂತ, ತಾನೊಬ್ಬ ಸೈಂಟಿಸ್ಟ್ ಎಂಬ ಗತ್ತಿನಲ್ಲಿ ಹೇಳುತ್ತಿದ್ದರೆ – ಆ ತುಟಿ, ಗಲ್ಲ, ಹುಬ್ಬು, ಬೆರಳ ತುದಿಯಾಟದಲ್ಲಿ ಜಗತ್ತೇ ಲೀನವಾದಂತೆ. ಸುಮಾರು ಅರ್ಧಗಂಟೆ ಸರಿದರೂ ಈ ಪರಿಚಯ ಪುರಾಣಕ್ಕೆ ಮುಕ್ತಾಯವಿಲ್ಲ. 'ನಿಮ್ಗೆ ಅಗತ್ಯ ಇದ್ದದ್ದರ ಮೇಲೆ ಟಿಕ್ ಮಾಡಿ' ಅಂದರೂ, ಬೆಳ್ಳಗಾಗುವ, ತೆಳ್ಳಗಾಗುವ, ಹಿಮ್ಮಡಿ ನೋವು ಕಮ್ಮಿಯಾಗುವವುಗಳನ್ನು ಖರೀದಿಸೋಣವೇ ಎಂದುಕೊಂಡರೆ, ಅವುಗಳ ಬಲಬದಿಯಲ್ಲಿ ದಾಖಲಾಗಿದ್ದ ನಾಲ್ಕಂಕಿ ಮೀರಿದ ಬೆಲೆಗಳು ಸಾಕಪ್ಪ ಸಹವಾಸ ಅಂತ ಹೆದರಿಸಿದುವು. ಮಾಧವಿ ದೇಸಾಯಿ ಹೇಳುತ್ತಿದ್ದಳು ಚಿಂತೆ ಬೇಡ. ಸರ್, ಕ್ಯಾಶ್ ಇಲ್ದಿದ್ರೆ ಕಾರ್ಡ್ ಸ್ವ್ಯಾಪ್ ಮಾಡ್ಬಹುದು. ಶಾಲಿನಿಗೆ ಹೊಳೆಯಿತು ಈ ಪರಿಚಯದ ಪರಸಂಗ ಒಂದೆರಡು ಟಿಕ್ ಮಾಡಿದ ಹೊರತೂ ಮುಗಿಯದ್ದು. ಕಡೆಗೂ ಇದ್ದುದ್ದರಲ್ಲೇ ಕಮ್ಮಿ ರೇಟಿನ ಹಿಮ್ಮಡಿ ನೋವಿನ ಮುಲಾಮು, ಮಗಳಿಗಿರಲಿ ಅಂತ ಫೇಸ್ ಜೆಲ್ ಆರ್ಡರಾಯಿತು, ಆ ತಣ್ಣಗಿನ ಲೋಕದಲ್ಲೂ ಬೆವರೊಡೆದಿದ್ದಳು ಶಾಲಿನಿ, ಸಾಕಿನ್ನು ನಮಗ್ಯಾವ ಟೂರ್ ಬೇಡ ಅಂತ ಏಳಲೂ ಮಾಧವಿ ಬಿಡಲಾರಳು. 'ಯಾಕೆ ಗಡಿಬಿಡಿ ಮ್ಯಾಂಮ್, ಲೈಫ್‌ಲ್ಲಿ ನೀವು ಗಂಡ ಹೆಂಡತಿಯರು ಎಂಜಾಯ್ ಮಾಡ್ಬೇಕು. ಮದ್ವೆ ಆಗಿಹೋಗಿರುತ್ತೆ. ರೂಟೀನ್ ಲೈಫ್ ಬೋರ್ ಅನ್ನಿಸ್ತಿರತ್ತೆ. ಗಂಡಸರು ಮುಖ್ಯ ಎಂಜಾಯ್ ಇಷ್ಟಪಡ್ತಾರೆ. ಅಲ್ವಾ ಸರ್? ಅಂತ ಹುಬ್ಬು ಏರಿಸಿದರೆ ಪ್ರದೀಪನಿಗೆ ಇಲ್ಲ ಎನ್ನಲು ಸಾಧ್ಯವೇ? ಇವಳ ಚೆಲುವಿನ ಆಕ್ರಮಣಕ್ಕೆ ಪ್ರದೀಪನ ನಾಲಿಗೆ ಒಣಗುತ್ತಿದೆ ಅನ್ನಿಸಿತ್ತು ಶಾಲಿನಿಗೆ. ಮಾಧವಿ ದೇಸಾಯಿಯವರ ನಿರಂತರ ಪ್ರವಚನ ನಡೆದಿತ್ತು ನೋಡಿ. ಮದ್ವೆಯಾಗಿ ಒಂದು ಹತ್ತೊರ್ಷ ಆದ್ಮೇಲೆ ಹೆಂಡತಿಯರು ದಪ್ಪಗಾಗಿರುತ್ತಾರೆ. ಜೀವನ ಬೋರ್ ಅನ್ನಿಸ್ತಿರತ್ತೆ. ಇಬ್ಬರೂ ಒಂದು 8–10 ದಿನ ಎಂಜಾಯ್ ಮಾಡಿ ಬಂದರೆ ಲೈಫ್‌ಗೆ ಮತ್ತೆ ರಿನೀವಲ್ ಲೈಸೆನ್ಸ್ ಸಿಕ್ಕ ಹಾಗೆ... ತುಂಟ ಕಣ್ಣುಗಳನ್ನವಳು ಪಕಪಕ ಅರಳಿಸಿ ಎಸೆಯುತ್ತಿದ್ದರೆ ಶಾಲಿನಿಗೆ ಒಳಗೇ ನೆತ್ತರು ಕುದಿಯತೊಡಗಿತ್ತು. 'ಅಲಾ ಹೆಣ್ಣೆ. ಮದ್ವೆಮಕ್ಳು, ಬಾಳು ಬವಣೆ ಗೊತ್ತಾ ನಿಂಗೆ? ಯಾರೋ ಕಲಿಸಿಟ್ಟ ಏನೋ ಒದರೋ ಮುಂಚೆ ಸಂಬಂಧ